# ಮಂಗಳೂರು ವಿಶ್ವವಿದ್ಯಾನಿಲಯ

ಸಂಖ್ಯೆ:ಮಂವಿವಿ/ಎಸ್‌ಸಿಟಿಘಟಕ/ಎಸ್‌ಸಿಪಿ-ಟಿಎಸ್‌ಪಿ/ಲ್ಯಾ.ಟಾ/2021-22/ಎಸ್ ಸಿ ಟಿ-1

ಕುಲಸಚಿವರ ಕಚೇರಿ
ಮಂಗಳಗಂಗೋತ್ರಿ-574199
ದಿನಾಂಕ: 22.09.2022

## ಸುತ್ತೋಲೆ

ವಿಷಯ: ಎಸ್‌ಸಿಪಿ-ಟಿಎಸ್‌ಪಿ ಯೋಜನೆಯಡಿ ಲ್ಯಾಪ್‌ಟಾಪ್ ಪಡೆಯಲು ಪ್ರಥಮ/ದ್ವಿತೀಯ ಸ್ನಾತಕೋತ್ತರ ವಿದ್ಯಾರ್ಥಿಗಳು ಹಾಗೂ ಸಂಶೋಧನಾ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುವ ಬಗ್ಗೆ.

**********

ಕರ್ನಾಟಕ ಸರಕಾರದ ಎಸ್‌ಸಿಪಿ-ಟಿಎಸ್‌ಪಿ ಯೋಜನೆಯಡಿಯಲ್ಲಿ 2021-22ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಆವರಣ, ಘಟಕ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರಥಮ ಮತ್ತು ದ್ವಿತೀಯ ವರ್ಷದ ಸ್ನಾತಕೋತ್ತರ ವಿದ್ಯಾರ್ಥಿಗಳು ಹಾಗೂ ಸಂಶೋಧನಾ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆಗೆ ಕ್ರಮ ಕೈಗೊಳ್ಳಲಾಗುತ್ತಿದ್ದು, ಈ ಕೆಳಗಿನ ಅರ್ಹತೆಗಳನ್ನು ಹೊಂದಿರುವ ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳು ನಿಗದಿತ ಅರ್ಜಿಯನ್ನು ಲಗತ್ತಿಸಿದ ನಮೂನೆಯಲ್ಲಿ ನೀಡಬೇಕಾಗಿರುತ್ತದೆ.

**ಅರ್ಜಿ ಸಲ್ಲಿಕೆಗೆ ಹೊಂದಿರಬೇಕಾದ ಅರ್ಹತೆಗಳು**:

1. ಕರ್ನಾಟಕ ರಾಜ್ಯದ ಅನುಸೂಚಿತ ಜಾತಿ/ಪಂಗಡದ ಗಣಕೀಕೃತ ಜಾತಿ ಪ್ರಮಾಣ ಪತ್ರ (ನಮೂನೆ-ಡಿ ,ಆರ್ ಡಿ ನಂಬ್ರ ನಮೂದಿಸಿದ ) ಹೊಂದಿರತಕ್ಕದ್ದು.
2. ಕುಟುಂಬದ ವಾರ್ಷಿಕ ವರಮಾನ 5.00 ಲಕ್ಷ ಮೀರಿರಬಾರದು ಈ ಬಗ್ಗೆ ತಹಶಿಲ್ದಾರರಿಂದ ಪಡೆದ ಗಣಕೀಕೃತ ಆದಾಯ ಪ್ರಮಾಣ ಪತ್ರ (ನಮೂನೆ-ಡಿ ಆರ್‌ಡಿ ನಂಬ್ರ ನಮೂದಿಸಿದ) ಹೊಂದಿರತಕ್ಕದ್ದು.
3. ಕರ್ನಾಟಕ ಸರಕಾರದ ಯಾವುದೇ ಯೋಜನೆಯಡಿಯಲ್ಲಿ ಈ ಹಿಂದೆ ಲ್ಯಾಪ್‌ಟಾಪ್ ಪಡೆದಿರಬಾರದು.
4. ಸದ್ರಿ ಸೌಲಭ್ಯವನ್ನು ಪಡೆಯುವ ಪರಿಶಿಷ್ಟ ವಿದ್ಯಾರ್ಥಿಗಳು ಮುಚ್ಚಳಿಕೆ, ದೃಢೀಕರಿಸಿದ ಆಧಾರ್ ಕಾರ್ಡ್ ಪ್ರತಿ ಮತ್ತು ವಿದ್ಯಾರ್ಥಿ/ನಿಯ ಗುರುತು ಚೀಟಿಯನ್ನು ಸಲ್ಲಿಸಿದ ನಂತರವೇ ಲ್ಯಾಪ್‌ಟಾಪ್ ಪಡೆಯಲು ಅರ್ಹರಾಗಿರುತ್ತಾರೆ.

ಮೇಲಿನ ಅರ್ಹತೆ ಹೊದಿರುವ ವಿದ್ಯಾರ್ಥಿಗಳು ಅರ್ಜಿಗಳನ್ನು ವಿಭಾಗದಲ್ಲಿ ಸಂಗ್ರಹಿಸಿ ವಿಭಾಗದ ಮುಖ್ಯಸ್ಥರ ಅಗತ್ಯ ದೃಢೀಕೃತ ದಾಖಲೆಗಳೊಂದಿಗೆ ದಿನಾಂಕ : 26.09.2022ರೊಳಗಾಗಿ ಈ ಕಚೇರಿಗೆ ಸಲ್ಲಿಸುವಂತೆ ಎಲ್ಲಾ ವಿಭಾಗದ ಅಧ್ಯಕ್ಷರುಗಳಿಗೆ / ಪ್ರಾಂಶುಪಾಲರಿಗೆ / ಸಂಯೋಜಕರಿಗೆ ಈ ಮೂಲಕ ತಿಳಿಸಲಾಗಿದೆ.

ಪ. ಜಾ/ಪ. ಪಂಗಡದ ವಿದ್ಯಾರ್ಥಿಗಳಿಗೆ ಈ ಬಗ್ಗೆ ಮಾಹಿತಿಯನ್ನು ವಿಭಾಗದಿಂದ ನೀಡುವುದು.

22/9/2022
ಕುಲಸಚಿವರ ಪರವಾಗಿ

ಅಡಕ: 1. ಅರ್ಜಿ ನಮೂನೆ
2. ಮುಚ್ಚಳಿಕೆ

ರಿಗೆ,

ಅಧ್ಯಕ್ಷರು / ಪ್ರಾಂಶುಪಾಲರು / ನಿರ್ದೇಶಕರು / ಸಂಯೋಜಕರು ಎಲ್ಲಾ ಸ್ನಾತಕೋತ್ತರ ವಿಭಾಗಗಳು, ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ, ತೊರೆನೂರು, ಸೋಮವಾರ ಪೇಟೆ ತಾಲೂಕು, ಕೊಡಗು, ಸಂಯೋಜಿತ ಕಾಲೇಜು ಹಂಪನಕಟ್ಟ ಮಂಗಳೂರು / ಮಡಿಕೇರಿ.

ಪ್ರತಿ:

ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕಿ ಮಂಗಳೂರು ವಿಶ್ವವಿದ್ಯಾನಿಲಯ.

# ಮಂಗಳೂರು ವಿಶ್ವವಿದ್ಯಾನಿಲಯ

## (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಘಟಕ)

## SCP/TSP ಯೋಜನೆಯಡಿ ಲ್ಯಾಪ್‌ಟಾಪ್ ಪಡೆಯಲು ಅರ್ಜಿ

| | | |
|---|---|---|
| 1. | ಹೆಸರು | |
| 2. | ವಿಳಾಸ<br><br>ಮೊಬೈಲ್ ಸಂಖ್ಯೆ: | |
| 3. | ಪ್ರಸ್ತುತ ವ್ಯಾಸಂಗ ಮಾಡುತ್ತಿರುವ ವಿಭಾಗ/ಕಾಲೇಜು | |
| 4. | ಈ ಹಿಂದೆ ವ್ಯಾಸಂಗ ಮಾಡಿದ ವಿಭಾಗ/ಕಾಲೇಜು | |
| 5. | ಜಾತಿ/ವರ್ಗ | |
| 6. | ಉಪ ಜಾತಿ | |
| 7. | ವಾರ್ಷಿಕ ಆದಾಯ | |
| 8. | ಈ ಹಿಂದಿನ ವ್ಯಾಸಂಗದ ಅವಧಿಯಲ್ಲಿ (ವಿಭಾಗ/ಕಾಲೇಜಿನಲ್ಲಿ) ಕರ್ನಾಟಕ ಸರಕಾರದ ಯಾವುದೇ ಯೋಜನೆಯಡಿಯಲ್ಲಿ ಲ್ಯಾಪ್‌ಟಾಪ್ ಪಡೆಯಲಾಗಿದೆಯೇ | ಹೌದು/ಇಲ್ಲ<br><br>(ಇಲ್ಲವೆಂದಾದಲ್ಲಿ ಈ ಹಿಂದೆ ವ್ಯಾಸಂಗ ಮಾಡಿದ ವಿಭಾಗದ/ಕಾಲೇಜು ಅಧ್ಯಕ್ಷರ/ಪ್ರಾಂಶುಪಾಲರಿಂದ ನಿಗದಿತ ನಮೂನೆಯಲ್ಲಿ ದೃಢೀಕರಣ ಪಡೆದು ಅರ್ಜಿ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ) |
| 9. | ಶುಲ್ಕ ಪಾವತಿ ಚಲನ್ ಸಂಖ್ಯೆ | |
| 10. | ಧೃಢೀಕರಿಸಿದ ಜಾತಿ ಪ್ರಮಾಣ ಪತ್ರ ಲಗತ್ತಿಸಲಾಗಿದೆಯೇ | ಹೌದು/ಇಲ್ಲ |
| 11. | ಧೃಢೀಕರಿಸಿದ ಆದಾಯ ಪ್ರಮಾಣ ಪತ್ರ ಲಗತ್ತಿಸಲಾಗಿದೆಯೇ | ಹೌದು/ಇಲ್ಲ |

**ಹಿಂದಿನ ವ್ಯಾಸಂಗ ಮಾಡಿದ ವಿಭಾಗದ/ಕಾಲೇಜು ಅಧ್ಯಕ್ಷರ/ಪ್ರಾಂಶುಪಾಲರ ಧೃಢೀಕರಣ**

( ಅರ್ಜಿಯ ಕ್ರಮ ಸಂಖ್ಯೆ 8.ಕ್ಕೆ ಸಂಬಂಧಿಸಿದಂತೆ)

ಶ್ರೀ____________________..ರವರ ಮಗ/ಳಾದ________________________..ರವರು ನಮ್ಮ ವಿಭಾಗ/ ಕಾಲೇಜಿನಲ್ಲಿ___.________ಶೈಕ್ಷಣಿಕ ವರ್ಷದಲ್ಲಿ____________ಪದವಿಯಲ್ಲಿ ವ್ಯಾಸಂಗ ಪೂರ್ಣಗೊಳಿಸಿರುತ್ತಾರೆ. ಈ ಅವಧಿಯಲ್ಲಿ ಸದರಿ ವಿಧ್ಯಾರ್ಥಿಯು ಕರ್ನಾಟಕ ಸರಕಾರದ ಯಾವುದೇ ಯೋಜನೆಯಡಿಯಲ್ಲಿ ಲ್ಯಾಪ್ ಟಾಪ್ ಪಡೆದಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಅಧ್ಯಕ್ಷರು/ಪ್ರಾಂಶುಪಾಲರು

ದಿನಾಂಕ:

(ಸಂಸ್ಥೆಯ ಮುದ್ರೆ)

**<u>ಪ್ರಸ್ತುತ ವ್ಯಾಸಂಗ ಮಾಡುತ್ತಿರುವ ವಿಭಾಗದ/ಕಾಲೇಜಿನ ಪ್ರಾಂಶುಪಾಲರ ಶಿಫಾರಸ್ಸು</u>**

ಮೇಲಿನ ವಿದ್ಯಾರ್ಥಿಯು ನಮೂದಿಸಿದ ಮಾಹಿತಿ/ದಾಖಲೆಗಳು ಸರಿಯಾಗಿದೆಯೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ ಮತ್ತು ಅರ್ಜಿಯನ್ನು ಮುಂದಿನ ಪ್ರಕ್ರಿಯೆಗೆ ಪರಿಗಣಿಸಲು ಶಿಫಾರಸ್ಸಿನೊಂದಿಗೆ ಕಳುಹಿಸಿ ಕೊಡುತ್ತಿದ್ದೇನೆ

ಅಧ್ಯಕ್ಷರು/ಪ್ರಾಂಶುಪಾಲರು

ವಿದ್ಯಾರ್ಥಿಯ ಸಹಿ

(ಮುದ್ರೆ)

ಪು..ತಿ.. ನೋ..

## ಮುಚ್ಚಳಿಕೆ

ಮಂಗಳೂರು ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ/ಪಂಗಡದ ಸಂಶೋಧನಾ/ಸ್ನಾತಕೋತ್ತರ ಪದವಿ ವಿದ್ಯಾರ್ಥಿಯಾದ ನಾನು________________________________ ಪರಿಶಿಷ್ಟ ಜಾತಿ/ಪಂಗಡದ ಸಂಶೋಧನಾ /ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ನೀಡುವ ಲ್ಯಾಪ್‌ಟಾಪ್ ಸೌಲಭ್ಯವನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಪಡೆದಿರುತ್ತೇನೆ ಹಾಗೂ ಈ ಕೆಳಗಿನ ಎಲ್ಲಾ ಷರತ್ತುಗಳಿಗೆ ನಾನು ಒಪ್ಪಿ ಕೊಂಡಿರುತ್ತೇನೆ.

1. ಸಂಶೋಧನಾ/ಸ್ನಾತಕೋತ್ತರ ಪದವಿ ವಿದ್ಯಾರ್ಥಿಯು ಲ್ಯಾಪ್‌ಟಾಪ್ ಯಂತ್ರಕ್ಕೆ ಮತ್ತು ಸಂಬಂಧಿಸಿದ ಉಪಕರಣಗಳಿಗೆ ಹಾನಿಯಾಗದಂತೆ ಜಾಗ್ರತೆ ವಹಿಸುವುದು.
2. ನಿರ್ದಿಷ್ಟ ಸಂಶೋಧನಾ /ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ನೀಡಿದ ಲ್ಯಾಪ್‌ಟಾಪ್‌ನ್ನು ಇತರರಿಗೆ ಪರಭಾರೆ ಮಾಡತಕ್ಕದ್ದಲ್ಲ.
3. ಲ್ಯಾಪ್‌ಟಾಪ್ ಯಂತ್ರವನ್ನು ಸಂಶೋಧನಾ /ಸ್ನಾತಕೋತ್ತರ ಪದವಿ ವ್ಯಾಸಂಗದ ಉದ್ದೇಶಕ್ಕಾಗಿ ಮಾತ್ರ ಬಳಸಿಕೊಳ್ಳುವುದು. ಲ್ಯಾಪ್‌ಟಾಪ್ ಯಂತ್ರವನ್ನು ಹಾಗೂ ಅಂತರ್‌ಜಾಲ ಸೌಲಭ್ಯವನ್ನು ಯಾವುದೇ ರೀತಿಯಲ್ಲಿ ದುರುಪಯೋಗವಾಗದಂತೆ ನೋಡಿಕೊಳ್ಳುವುದು. ಒಂದು ವೇಳೆ ದುರುಪಯೋಗವಾಗಿರುವುದು ಕಂಡು ಬಂದಲ್ಲಿ ಲ್ಯಾಪ್‌ಟಾಪ್ ಹಿಂಪಡೆದು ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು.
4. ಸದ್ರಿ ಲ್ಯಾಪ್‌ಟಾಪ್ ಸೌಲಭ್ಯವನ್ನು ಪೂರ್ಣಕಾಲಿಕ ನೆಲೆಯಲ್ಲಿ ಸಂಶೋಧನಾ /ಸ್ನಾತಕೋತ್ತರ ಪದವಿ ವ್ಯಾಸಂಗ ಕೈಗೊಳ್ಳುವ ವಿದ್ಯಾರ್ಥಿಗಳಿಗೆ ಮಾತ್ರ ನೀಡಲಾಗುತ್ತದೆ.
5. ಪಡೆದಿರುವ ಲ್ಯಾಪ್‌ಟಾಪ್‌ನಲ್ಲಿ ತಾಂತ್ರಿಕ ದೋಷ ಕಂಡು ಬಂದಲ್ಲಿ ಮತ್ತು ಹಾನಿಯಾದಲ್ಲಿ ಸಂಶೋಧನಾ/ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳೇ ಜವಾಬ್ದಾರರಾಗಿರುತ್ತಾರೆ.
6. ವಿಶ್ವವಿದ್ಯಾನಿಲಯವು ಯಾವುದೇ ಕಾರಣಕ್ಕೂ ಲ್ಯಾಪ್‌ಟಾಪ್‌ನ್ನು ಬದಲಿಸಿ ಕೊಡುವ ಅಥವಾ ದುರಸ್ತಿಪಡಿಸಿ ಕೊಡುವ ಹೊಣೆಗಾರಿಕೆಯನ್ನು ಹೊಂದಿರುವುದಿಲ್ಲ.

(ವಿದ್ಯಾರ್ಥಿಯ ಸಹಿ)

## ಸ್ವೀಕೃತಿ

ನಾನು ಮಂಗಳೂರು ವಿಶ್ವವಿದ್ಯಾನಿಲಯದ SC/ST ಘಟಕದ ವತಿಯಿಂದ_________________ ಬ್ರಾಂಡ್‌ನ ______________________ versionನ ____________________ ಮಾದರಿಯ ಸಂಖ್ಯೆ_________________ಯ ಲ್ಯಾಪ್‌ಟಾಪ್ ಒಂದನ್ನು ಹಾಗೂ ಅದಕ್ಕೆ ಸಂಬಂಧಿಸಿದ ಉಪಕರಣಗಳನ್ನು ದಿನಾಂಕ____________________ರಂದು ಪಡೆದುಕೊಂಡಿರುತ್ತೇನೆ. ಇದಕ್ಕೆ ಸಂಬಂಧಿಸಿ, ಮೇಲ್ಕಾಣಿಸಿದ ಎಲ್ಲಾ ಷರತ್ತುಗಳಿಗೆ ಒಪ್ಪಿದ ನಂತರ ಈ ಕೆಳಗಡೆ ಸಹಿ ಮಾಡಿರುತ್ತೇನೆ.

(ವಿದ್ಯಾರ್ಥಿ ಸಹಿ)

ಹೆಸರು :

ಖಾಯಂ ವಿಳಾಸ: